**4 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ಹುಬ್ಬಳ್ಳಿ**

ಸಿ ಸಿ ನಂ : 6181/2022

ಸಿ ಡಬ್ಲ್ಯೂ– 4

ಪಿಡಬ್ಲ್ಯೂ – 2

ದಿಃ 20–03–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಪ್ರತಿಭಾ ಪ್ರಭುಲಿಂಗಸ್ವಾಮಿ ಪುರಾಣಿಕಮಠ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಗೃಹಿಣಿ |
| ವಿಳಾಸ | : | ಸಹದೇವ ನಗರ, ಹಳೇ ಹುಬ್ಬಳ್ಳಿ |

ಮುಖ್ಯ ವಿಚಾರಣೆ : ಸ ಸ ಅ ರವರಿಂದಃ

ಚಾಸಾ–1 ನನ್ನ ಗಂಡ. ಆರೋಪಿತರ ಪರಿಚಯ ಇರುತ್ತದೆ. ಈಗ ಸುಮಾರು 3 ವರ್ಷಗಳ ಹಿಂದೆ ನಮ್ಮ ಮತ್ತು ಆರೋಪಿತರ ನಡುವೆ ಕಂಪೌಂಡ ಜಾಗೆಯ ಸಲುವಾಗಿ ಮತ್ತು ನೀರಿನ ಸಲುವಾಗಿ ಬಾಯಿಮಾತಿನ ಜಗಳವಾಗಿರುತ್ತದೆ. ಈ ಕುರಿತು ಚಾಸಾಃ1 ರವರು ಹಳೇ ಹುಬ್ಬಳ್ಳಿ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಆರೋಪಿತರು ನನಗೆ ಮತ್ತು ಚಾಸಾಃ1 ರವರಿಗೆ ಕೈಯಿಂದ ಮತ್ತು ಇಟ್ಟಿಗೆಯಿಂದ ಹಲ್ಲೆ ಮಾಡಿರುವುದಿಲ್ಲ, ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ ಹಾಗೂ ಯಾವುದೇ ಜೀವಬೆದರಿಕೆ ಹಾಕಿರುವುದಿಲ್ಲ. ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ಈ ಮುಂಚೆ ನೋಡಿರುವುದಿಲ್ಲ. ಘಟನೆಯ ಕುರಿತು ಹೆಚ್ಚಿನ ಮಾಹಿತಿ ಇರುವುದಿಲ್ಲ.

( ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಪರವಾನಿಗೆ ಕೇಳಿದ್ದರಿಂದ ನೀಡಲಾಯಿತು)

**ಪಾಟೀ ಸವಾಲುಃ** ಸ ಸ ಅ ರವರಿಂದಃ

ನಾವು 7 ನೇ ಕ್ರಾಸ್ ನಲ್ಲಿರುವ ನನ್ನ ಗಂಡನ ಅಣ್ಣನ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ಮನೆಯ ಪಕ್ಕದಲ್ಲಿ ಆರೋಪಿತರು ವಾಸವಾಗಿರುತ್ತಾರೆ ಎಂದರೆ ಸರಿ. ಸುಮಾರು 3 ವರ್ಷಗಳಿಂದ ಆರೋಪಿತರ ಮನೆಯ ಚರಂಡಿ ನೀರು ಮತ್ತು ನೀರಿನ ಟ್ಯಾಂಕ್ ತುಂಬಿ ಹರಿದು ನಮ್ಮ ಕಂಪೌಂಡ ಒಳಗಡೆ ಬರುತ್ತಿದ್ದ ಕಾರಣ ಜಗಳವಾಗಿ ಓಣಿಯ ಹಿರಿಯರು ಬುದ್ದಿ ಮಾತು ಹೇಳಿದ್ದರು ಎಂದರೆ ಸರಿಯಲ್ಲ. ದಿಃ 20-02-2022 ರಂದು ಬೆಳಿಗ್ಗೆ 8.00 ಗಂಟೆ ಸುಮಾರಿಗೆ ಆರೋಪಿತರ ನೀರಿನ ಟ್ಯಾಂಕ್ ತುಂಬಿ ನಮ್ಮ ಕಂಪೌಂಡ ಒಳಗೆ ಬಂದ ಕಾರಣ ಆರೋಪಿತರಿಗೆ ಸರಿಪಡಿಸುವಂತೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಆಗ ಆರೋಪಿತರು ನಾವು ಸರಿಪಡಿಸುವುದಿಲ್ಲ ನೀವೇ ಮನೆಯನ್ನು ಬಿಟ್ಟು ಹೋಗಿ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿಃ 21-02-2022 ರಂದು ಬೆಳಿಗ್ಗೆ 8.00 ಗಂಟೆ ಸುಮಾರಿಗೆ ಚಾಸಾಃ1 ರವರು ಕರ್ತವ್ಯಕ್ಕೆ ಹೋಗಿ ಮರಳಿ ಮನೆಗೆ ಬಂದಾಗ ಆರೋಪಿತರು ನಮ್ಮ ಮನೆಯ ಗೇಟ ಹತ್ತಿರ ಬಂದು ನನಗೆ ಅವಾಚ್ಯ ಶಬ್ಧಗಳಿಂದ ಬೈದು ಜಗಳ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾಃ1 ರವರು ನನಗೆ ಸಮಾಧಾನ ಮಾಡಿ ಮರಳಿ ಕಳುಹಿಸುತ್ತಿರುವಾಗ ಆರೋಪಿತರು ತಮ್ಮ ಮನೆಯ ಮುಂದಿನ ಇಟ್ಟಿಗೆಯನ್ನು ತೆಗೆದುಕೊಂಡು ಚಾಸಾಃ1 ರವರ ತಲೆಗೆ ಹೊಡೆದು ಗಾಯ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ವೇಳೆಗೆ 2 ನೇ ಆರೋಪಿತಳು ಒಂದು ಸ್ಟೀಲಿನ ಪೈಪನ್ನು ತೆಗೆದುಕೊಂಡು ಚಾಸಾಃ1 ರವರ ಬಲಗಡೆ ಪಕ್ಕಡಿಗೆ ಮತ್ತು ಮೊಣಕೈಗೆ ಗಾಯ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾಃ1 ರವರು

ಚೀರಾಡಲು ಅಲ್ಲಿದ್ದ ಚಾಸಾಃ 5 ರಿಂದ ಚಾಸಾಃ 9 ರವರು ಜಗಳ ನೋಡಿ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿಃ 21-02-2022 ರಂದು ಪೋಲಿಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಸ್ವತಃ ನಾವು ಈಗ ಹಿರಿಯರ ಮಾತು ಕೇಳಿ ಪ್ರಕರಣದಲ್ಲಿ ರಾಜೀ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ರಾಜೀ ಆದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)

ಓ. ಹೇ. ಕೇ. ಸ. ಅದೆ

Sd/-,

4 ನೇ ಹೆ. ದಿ. ನ್ಯಾ
ಮತ್ತು ಜೆ.ಎಂ.ಎಫ್.ಸಿ., ಹುಬ್ಬಳ್ಳಿ